ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂ: ಡಿಟಿಇ:03:ಎಲ್ಆರ್‌ಡಿಸಿ:2019-20

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು -01
ದಿನಾಂಕ: 18-04-2020

"ಸುತ್ತೋಲೆ"

ವಿಷಯ : NOVAL CORONA VIRUS (COVID 19) ವೈರಸ್‌ನ ಸೋಂಕು ತಡೆಗಟ್ಟುವ ಮುಂಜಾಗ್ರತಾ ಕ್ರಮವಾಗಿ ದೇಶ್ಯಾದ್ಯಂತ ಲಾಕ್ ಡೌನ್ ಘೋಷಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳ ಬೋಧಕ ವೃಂದದವರು ZOOM APP ಬಳಸಿಕೊಂಡು ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸುತ್ತಿರುವುದನ್ನು ಸ್ಥಗಿತಗೊಳಿಸಿ **ಇತರೆ ಸುರಕ್ಷಿತ ಆನ್‌ಲೈನ್ ಪ್ಲಾಟ್‌ಫಾರಂಗಳನ್ನು ಬಳಸುವ ಕುರಿತು**

ಉಲ್ಲೇಖ: 1) ತಾಂತ್ರಿಕ ಶಿಕ್ಷಣ ನಿರ್ದೇಶನಾಯಲದ ಸುತ್ತೋಲೆ ಸಂ: ಡಿಟಿಇ:03:ಎಲ್ಆರ್‌ಡಿಸಿ:2019-20, ದಿನಾಂಕ:28-03-2020.

2) ಕೇಂದ್ರ ಸರ್ಕಾರದ ಗೃಹ ಇಲಾಖೆ ಮಂತ್ರಾಲಯದ ಸೈಬರ್ ಸಮನ್ವಯ ಕೇಂದ್ರ ರವರ ಅಡ್ವೈಸರಿ ದಿನಾಂಕ:12-04-2020.

3) "TCS iON Digital Class Room- A virtual learning platform at free of cost" application "ಬಳಸುವಂತೆ ಎಐಸಿಟಿಇ ನೀಡಿರುವ ಮಾರ್ಗಸೂಚಿ

4) ಕೇಂದ್ರ ಸರ್ಕಾರದ ಗೃಹ ಇಲಾಖೆ ಮಂತ್ರಾಲಯ ರವರ ಅಡ್ವೈಸರಿ ದಿನಾಂಕ:16-04-2020.

5) ಸರ್ಕಾರದ ಸುತ್ತೋಲೆ ಸಂ: ಇಡಿ 139 ಯುಎನ್‌ಇ 2020, ದಿನಾಂಕ:18-04-2020

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, NOVAL CORONA VIRUS (COVID 19) ವೈರಸ್‌ನ ಸೋಂಕು ತಡೆಗಟ್ಟುವ ಮುಂಜಾಗ್ರತಾ ಕ್ರಮವಾಗಿ ದೇಶ್ಯಾದ್ಯಂತ ಲಾಕ್ ಡೌನ್ ಘೋಷಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ (1) ರ ಸುತ್ತೋಲೆಯಂತೆ ಈಗಾಗಲೇ ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ/ಖಾಸಗಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳ ಬೋಧಕ ವೃಂದದವರು ದಿನಾಂಕ:28-03-2020 ರಿಂದ ಇಲ್ಲಿಯವರೆಗೆ ಈ ಕೆಳಕಂಡ **ಪ್ಲಾಟ್‌ಫಾರಂಗಳನ್ನು** ಬಳಸಿಕೊಂಡು ವಿದ್ಯಾರ್ಥಿಗಳಿಗೆ ತರಗತಿಗಳನ್ನು ಪರಿಣಾಮಕಾರಿಯಾಗಿ ನಡೆಸಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

Zoom App, Impartus, Whatsapp, VTU's E-learning Portal, NPTEL, AICTE's SWAYAM Portal etc.

ಉಲ್ಲೇಖ (2) ಮತ್ತು (4) ರ ಅನ್ವಯ, ಉಲ್ಲೇಖ (5)ರ ಸರ್ಕಾರದ ಸುತ್ತೋಲೆಯಲ್ಲಿ ಟೆಲಿ ಕಾನ್ಫರೆನ್ಸ್, ಆನ್‌ಲೈನ್ ಬೋಧನೆಗೆ ವ್ಯಾಪಕವಾಗಿ ಬಳಕೆಯಾಗುತ್ತಿರುವ "ಜೂಮ್ ಆಪ್" (ZOOM APP) ಸುರಕ್ಷಿತವಲ್ಲವೆಂದು ತಿಳಿಸಲಾಗಿದೆ.

ಉಲ್ಲೇಖ (3) ರ ಎಐಸಿಟಿಇ ಮಾರ್ಗಸೂಚಿಯಂತೆ TCS ಕಂಪನಿಯು ಅಭಿವೃದ್ಧಿಪಡಿಸಿರುವ ಆನ್‌ಲೈನ್ ಪ್ಲಾಟ್‌ಫಾರಂ " TCS iON Digital Class Room- A virtual learning platform at free of cost" application ಅನ್ನು ಬಳಸಿಕೊಂಡು ಆನ್‌ಲೈನ್ ತರಗತಿಗಳನ್ನು ನಡೆಸುವುದು, ಕಂಟೆಂಟ್‌ನ ಸೃಷ್ಠಿ ಮತ್ತು ಶೇರಿಂಗ್, ಆನ್‌ಲೈನ್ ಫಾರ್ಮಾಟಿವ್ ಟೆಸ್ಟ್, ಅಸೈನ್‌ಮೆಂಟ್‌ಗಳ ಮೌಲ್ಯಮಾಪನ ಹಾಗೂ ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯ ಮೇಲ್ವಿಚಾರಣೆಯನ್ನೂ ಮಾಡಬಹುದಾಗಿದೆ.

ಪ್ರಯುಕ್ತ ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ/ ಖಾಸಗಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಗಳ ಬೋಧಕ ವೃಂದದವರು ತತ್‌ಕ್ಷಣದಿಂದ ಜೂಮ್ ಆಪ್ (ZOOM APP) ಅನ್ನು ಬಳಸುವುದನ್ನು ಸ್ಥಗಿತಗೊಳಿಸಿ, ಬದಲಿಗೆ ಎಐಸಿಟಿಇ ಮಾರ್ಗಸೂಚಿಯಂತೆ "TCS iON Digital Class Room- A virtual learning platform at free of cost" application ಅಥವಾ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಮತ್ತು ಎಐಸಿಟಿಇ ಮಾರ್ಗಸೂಚಿಯಂತೆ ಇತರೆ **ಸುರಕ್ಷಿತ ಆನ್‌ಲೈನ್ ಪ್ಲಾಟ್‌ಫಾರಂಗಳನ್ನು** ಬಳಸಿಕೊಂಡು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೇಲಿನ ಎಲ್ಲಾ ತಾಂತ್ರಿಕ ಸಂಸ್ಥೆಗಳ ಬೋಧಕ ವೃಂದದವರು ಲಾಕ್‌ಡೌನ್ ಅವಧಿಯು ಮುಕ್ತಾಯಗೊಳ್ಳುವವರೆಗೆ ಪರಿಣಾಮಕಾರಿಯಾಗಿ ಆನ್‌ಲೈನ್ ತರಗತಿಗಳನ್ನು ನಡೆಸುವುದು, ಕಂಟೆಂಟ್‌ನ ಸೃಷ್ಠಿ ಮತ್ತು ಶೇರಿಂಗ್, ಆನ್‌ಲೈನ್ ಫಾರ್ಮಾಟಿವ್ ಟೆಸ್ಟ್, ಅಸೈನ್‌ಮೆಂಟ್‌ಗಳ ಮೌಲ್ಯಮಾಪನ, ಹಿಂದಿನ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿರುವ ಪ್ರಶ್ನೆಗಳಿಗೆ ಮಾದರಿ ಉತ್ತರಗಳನ್ನು ಸಿದ್ಧ ಪಡಿಸಿ ವಿದ್ಯಾರ್ಥಿಗಳೊಂದಿಗೆ ಶೇರ್ ಮಾಡುವುದು ಹಾಗೂ ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯ ಮೇಲ್ವಿಚಾರಣೆಯನ್ನು ನಿರ್ವಹಿಸುವಂತೆ ಸೂಚಿಸಲಾಗಿದೆ. ಸಂಸ್ಥೆಗಳ ಪ್ರಾಂಶುಪಾಲರುಗಳು ಈ ಸಂಬಂಧ ವೈಯಕ್ತಿಕವಾಗಿ ನಿಗಾ ವಹಿಸಿ, ಈ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಕಾಲ ಕಾಲಕ್ಕೆ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ.

ಇವರಿಗೆ,

1. ರಾಜ್ಯದ ಎಲ್ಲಾ ಎಲ್ಲಾ ಸರ್ಕಾರಿ / ಅನುದಾನಿತ/ ಖಾಸಗಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರುಗಳಿಗೆ
2. ಎಲ್ಲಾ ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ರವರುಗಳಿಗೆ ಮಾಹಿತಿಗಾಗಿ
3. ಇ- ಗವರ್ನೆನ್ಸ್ ಸಂಯೋಜಕರು – ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಚುರಪಡಿಸುವಂತೆ